11) ಶಾರದ ಅದ್ಯಂತಾಯ, ಶಾರದ ಸದನ, ಕೋರ್ಟ್ ರೋಡ್, ಉಡುಪಿ.

12) ಕರೆಸ್ಪಾಂಡೆನ್ಸ್ ಸೆಂಟ್ ಮೇರಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನಸ್ಟಿಟ್ಯೂಟ್ ಉಡುಪಿ

13) ರತ್ನಾಕರ ಡಿ.ಶೆಟ್ಟಿ ಮತ್ತು ಪಾರಿಕ ಶೆಟ್ಟಿ ಅಪರ್ಣ ನಿವಾಸ, ತೆಂಕಬೆಟ್ಟು, ಅಂಚೆ:ಉಪ್ಪೂರು ಉಡುಪಿ.

14) ಡೈರೆಕ್ಟರ್ ಜನರಲ್ ಸರ್ವೀಸಸ್, ಮಾಹೆ, ಮಣಿಪಾಲ

15) ನರ್ಗಿಸ್ ಅನ್ಸಾರ್, ಜೆ.ಪಿ.ಎ.ಅಫ್. ಮ್ಯಾನೇಜಿಂಗ್ ಪಾರ್ಟನರ್, ಎ.ಕೆ. ಸೋನ್ಸ್ ಉಡುಪಿ.

16) ಮನೋಹರ್ ಶೆಟ್ಟಿ, ಉಷಾ ಎಸ್ ಶೆಟ್ಟಿ ಮತ್ತು ವನಿತಾ, ರಾಧಾ, ಛಾಯಾ, ಉಳಿಯಾರಗೋಳಿ, ಕಾಪು.

17) ದೇವದಾಸ್ ಹೆಗ್ಡೆ, ಮಣ್ಣಗುಡ್ಡೆ, ಮಂಗಳೂರು.

ಅ)	1998-1999	1999-2000	2000-2001
	4	-	-

ಇ) ಉಲ್ಲಂಘಿಸಿ ಕಟ್ಟಿರುವ ಕಟ್ಟಡಕ್ಕೆ ನಿಯಮಾವಳಿಗಳಂತೆ ದಂಡ ವಿಧಿಸಿ ಸಕ್ರಮಗೊಳಿಸಲಾಗಿದೆ.

ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು

4808 - ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡಿರಿ) ?

ಆ) ಆ ಪೈಕಿ ರೋಗಗ್ರಸ್ತವಾಗಿ ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡಿರಿ)

ಇ) ರೋಗಗ್ರಸ್ತ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳು ಯಾವುವು ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 2,58,032 (ದಿನಾಂಕ: 31-8-2000ದ ವರೆಗೆ) ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಟಿಕ್ಸಾಕ್‌ನವರು ನಡೆಸಿದ ಮಾದರಿ ಸಮೀಕ್ಷೆ ವರದಿ ಪ್ರಕಾರ ರಾಜ್ಯದಲ್ಲಿ ಇರುವ

ಕೈಗಾರಿಕೆಗಳ ಪೈಕಿ ಶೇ 5.4 ರಷ್ಟು ಘಟಕಗಳು ರೋಗಗ್ರಸ್ತವಾಗಿದೆ ಮತ್ತು ಶೇ.28.95 ರಷ್ಟು ಘಟಕಗಳು ಮುಚ್ಚಿರುವುದಾಗಿ ತಿಳಿದು ಬಂದಿದೆ.

ಇ) ರೋಗಗ್ರಸ್ತ ಕೈಗಾರಿಕೆಗಳಿಗೆ ಯೋಜನಾ ವೆಚ್ಚದ ಶೇ.25ರಷ್ಟು ಗರಿಷ್ಠ 2.50 ಲಕ್ಷಗಳಿಗೆ ಮೀರದಂತೆ ಬಡ್ಡಿರಹಿತ ಬೀಜಧನ ಸಾಲ, ಮಾರಾಟ ತೆರಿಗೆ ಬಾಕಿಯನ್ನು ಪಾವತಿಸುವ ಬಗ್ಗೆ ಅವಧಿ ಮುಂದೂಡಿಕೆ, ವಿದ್ಯುತ್ ಶುಲ್ಕ ಪಾವತಿ ಬಗ್ಗೆ ರಿಯಾಯಿತಿ, ಅಭಿವೃದ್ಧಿ ಸಾಲ ಬಾಕಿ ಪಾವತಿ ಬಗ್ಗೆ ಅವಧಿ ಮುಂದೂಡಿಕೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ.

SSI REGISTRATION UPTO AUGUST 2000

Sl. No.	District/Division	No. of Units Registered
I.	**BANGALORE DIVISION**	
01.	Bangalore (Urban)	47760
02.	Bangalore (Rural)	11197
03.	Chitradurga	8346
04.	Davanagere	508
05.	Kolar	9734
06.	Shimoga	11620
07.	Tumkur	15342
II.	**MYSORE DIVISION**	
01.	Chickmagalur	4388
02.	D. Kannada (M'lore)	16008
03.	Udupi	1008
04.	Hassan	6798
05.	Kodagu	2568
06.	Mandya	5860
07.	Mysore	21571
08.	Chamarajanagar	520

Sl.	District/Division	No. of Units Registered
III.	**GULBARGA DIVISION**	
01.	Bellary	10423
02.	Bidar	5829
03.	Gulbarga	9571
04.	Raichur	8646
05.	Koppal	165
IV.	**BELGAUM DIVISION**	
01.	Belgaum	24135
02.	Bijapur	8689
03.	Bagalkote	485
04.	Dharwad	20321
05.	Gadag	457
06.	Haveri	254
07.	U.Kannada (Karwar)	5609
	Total	**25832**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳು

*4809 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1999-2000ನೆ, 2000-2001ನೇ ಸಾಲುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳನ್ನು ತೆರೆಯಲು ಸರ್ಕಾರ ಮಂಜೂರಾತಿ ನೀಡಿದೆ. (ಜಿಲ್ಲಾವಾರು ವಿವರ ನೀಡಿರಿ)*

2) *ಮಂಜೂರಾತಿಯಾಗಿರುವ ಈ ವಿದ್ಯಾರ್ಥಿನಿಲಯಗಳಿಗೆ ಮೇಲ್ಕಂಡ ಸಾಲುಗಳಲ್ಲಿ ಬಿಡುಗಡೆಯಾಗಿರುವ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡಿರಿ)*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ 7 ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಹಾಗೂ 2000-2001ನೇ ಸಾಲಿನಲ್ಲಿ 5 ಪರಿಶಿಷ್ಟ ವರ್ಗದ ಮೆಟ್ರಿಕ್‌ಪೂರ್ವ